SE – 004

LIBRARY
Acc. No.
Date

**ಮೊದಲನೆ ಸೆಮಿಸ್ಟರ್ ಬಿ.ಬಿ.ಎ. ಪರೀಕ್ಷೆ, ಜನವರಿ 2025**
**(ಎಸ್ಇಪಿ 2024 – 25)**
**ಕನ್ನಡ ಭಾಷಾ ಪಠ್ಯ ಪತ್ರಿಕೆ – ೧**
**ವ್ಯವಹಾರ ನಿರ್ವಹಣಾ ಕನ್ನಡ – ೧**

ಸಮಯ : 3 ಗಂಟೆಗಳು — ಗರಿಷ್ಠಾಂಕಗಳು : 80

I. ಐದು ಪ್ರಶ್ನೆಗಳಿಗೆ ಉತ್ತರ ಬರೆಯಿರಿ. (**100** ಪದಗಳನ್ನು ಮೀರದಂತೆ) **(5×5=25)**

1) 'ಉದಯವಾಗಲಿ ನಮ್ಮ ಚೆಲುವ ಕನ್ನಡ ನಾಡು' ಕವಿತೆಯ ಮಹತ್ವವೇನು ?
2) ದ್ವಿಭಾಷಿಕತೆ ಎಂದರೇನು ? ಪರಿಚಯಿಸಿ.
3) ಸೌಂದರ್ಯ ಯಾವಾಗ ಶಾಪವಾಗುತ್ತದೆ ? ಯಾವಾಗ ವರವಾಗುತ್ತದೆ ?
4) ಭಾರತದಲ್ಲಿ ನೀರು ಕೊಡುವ ಸಂಸ್ಕೃತಿಯ ಬಗ್ಗೆ ನೇಮಿಚಂದ್ರರವರ ಅನುಭವವೇನು ?
5) 'ಗಂಡ–ಹೆಂಡಿರ ಜಗಳ ಗಂಧ ತೀಡಿದ್ಹಾಂಗ' ಪದ್ಯದ ವೈಶಿಷ್ಟ್ಯವೇನು ?
6) ಲಲಿತಾ ಏಕಾಂಗಿಯಾಗಿ ಬದುಕನ್ನು ಕಟ್ಟಿಕೊಂಡ ಬಗೆ ಹೇಗೆ ?
7) ವಾರೆನ್ ಬಫೆಟ್‌ನ ವ್ಯಕ್ತಿತ್ವವನ್ನು ಪರಿಚಯಿಸಿ.

II. **ಮೂರು** ಪ್ರಶ್ನೆಗಳಿಗೆ ಉತ್ತರ ಬರೆಯಿರಿ. (**200** ಪದಗಳನ್ನು ಮೀರದಂತೆ) **(3×10=30)**

1) ಉದ್ಯೋಗ ಮತ್ತು ಕನ್ನಡದ ನಡುವೆ ಇರಬೇಕಾದ ಸಂಬಂಧದ ಬಗ್ಗೆ ಬರಗೂರರ ಅಭಿಪ್ರಾಯಗಳೇನು ? ವಿವರಿಸಿ.
2) ನೀರಿನ ಹೆಸರಿನಲ್ಲಿ ನಡೆಯುತ್ತಿರುವ ಹುನ್ನಾರಗಳು 'ನೀರು ಕೊಡದ ನಾಡಿನಲ್ಲಿ' ಲೇಖನದಲ್ಲಿ ಹೇಗೆ ಚಿತ್ರಿತವಾಗಿದೆ ? ವಿವರಿಸಿ.
3) ಬಂಧು–ಬಳಗದವರ ವರ್ತನೆಯನ್ನು 'ಹೃದಯದ ತೊಂದರೆ' ಕತೆಯ ಹಿನ್ನಲೆಯಲ್ಲಿ ವಿವರಿಸಿ.
4) ಹೆಣ್ಣು ಮಕ್ಕಳ ಸಂಘಟನೆಯಾಗಿ ಚರಕ ಸಂಸ್ಥೆ ಹೇಗೆ ಕೆಲಸ ಮಾಡುತ್ತದೆ ? ವಿವರಿಸಿ.

III. ಕೆಳಗಿನ ಕಂಡಿಕೆಯನ್ನು **ಮೂರನೇ ಒಂದು** ಭಾಗಕ್ಕೆ ಸಂಕ್ಷೇಪಿಸಿ, ಸೂಕ್ತ ಶೀರ್ಷಿಕೆ ನೀಡಿರಿ. **(1×5=5)**

ಇಂಗ್ಲೀಷ್, ಫ್ರೆಂಚ್ ಮತ್ತು ಜರ್ಮನ್ ಭಾಷೆಗಳಿಗೆ ಹೋಲಿಸಿದರೆ ಆಧುನಿಕ ಕನ್ನಡ ಒಂದು ಪ್ರಮಾಣೀಕರಣ ಘಟ್ಟವನ್ನು ತಲುಪಿದೆ ಎಂದು ಹೇಳುವಂತಿಲ್ಲ. ಕನ್ನಡ ಬಹಳ ಪ್ರಾಚೀನವಾದ ಭಾಷೆ ಎನ್ನುವುದು ನಿಜ; ಕನ್ನಡ ಸಾಹಿತ್ಯದ ಪ್ರಮಾಣವು ಸಾಕಷ್ಟು ದೊಡ್ಡದು ಮತ್ತು ದೀರ್ಘ ಇತಿಹಾಸ ಉಳ್ಳದ್ದು. ಹೀಗಿದ್ದು ಇಂದಿನ ಕನ್ನಡ ಮೂಲ ವಿಜ್ಞಾನಕ್ಕೆ 'ಸಾಮಾಜಿಕ ವಿಜ್ಞಾನಕ್ಕೆ' ತತ್ವಜ್ಞಾನ ಭಾಷಾ ವಿಜ್ಞಾನವೇ ಮುಂತಾದ ಹತ್ತು ಹಲವಾರು ಶಿಸ್ತುಗಳಿಗೆ ಮಾಧ್ಯಮವಾಗುವುದಕ್ಕೆ ಸಾಧ್ಯವಾಗಿದೆಯೇ ? ಸಾಧ್ಯವಾಗಬೇಕಾದರೆ ಏನಾಗಬೇಕು ? ಇಂಥ

**P.T.O.**

Scanned with OKEN Scanner

ಪ್ರಶ್ನೆಗಳನ್ನು ನಾವು ಕೈಗೆತ್ತಿಕೊಂಡಾಗ ಅನ್ನಿಸುವುದು– ಕನ್ನಡದ ಆಧುನೀಕರಣ ಇನ್ನೂ ಆಗಬೇಕಾಗಿದೆ ಎಂದು. ಪ್ರಪಂಚದ ಯಾವುದೇ ವಿಷಯದ ಕುರಿತು ಕನ್ನಡದಲ್ಲೇ ವಿವೇಚಿಸುವುದರ ಜೊತೆಯಲ್ಲೇ ಪ್ರಮಾಣೀಕರಣವೂ ಆಗಬೇಕು. ಎಂದರೆ ನಿಖರವಾಗಿ ಮಾತನಾಡುವುದು, ಬರೆಯುವುದು, ಅರ್ಥಮಾಡುವುದು ಸಾಧ್ಯವಾಗಬೇಕು. ಇದೆಲ್ಲಾ ಜತೆ ಜತೆಯಾಗಿ ಆಗಬೇಕಾದ ಕೆಲಸ. ವಿಚಾರ ಸಾಹಿತ್ಯದ ರಚನೆಯಿಂದಲೇ ಇಂತಹ ಭಾಷೆಯು ಅಸ್ತಿತ್ವಕ್ಕೆ ಬರುವುದು. ಮೊದಲು ಭಾಷೆ ಅಸ್ತಿತ್ವಕ್ಕೆ ಬರಲಿ ಆಮೇಲೆ ನೋಡೋಣ ಎಂಬಂತಿಲ್ಲ.

IV. ಸಂಕ್ಷೇಪಿಸಿದ ಬರಹ ಆಧರಿಸಿ ಎರಡು ಪ್ರಶ್ನೆಗಳನ್ನು ರೂಪಿಸಿ. (2x1=2)

V. ಇವುಗಳಲ್ಲಿ ಎರಡು ಪದಗಳನ್ನು ಬಳಸಿ ಸ್ವಂತ ವಾಕ್ಯ ರಚಿಸಿ. (2x2=4)

1) ಅನುವಾದ
2) ಏಕೀಕರಣ
3) ಕೊಳ್ಳುಬಾಕತನ
4) ಆಪರೇಶನ್

VI. ನಿಮ್ಮ ಬಡಾವಣೆಗೆ ನೀರನ್ನು ಸರಿಯಾಗಿ ಒದಗಿಸುವಂತೆ ಪುರಸಭೆಗೆ ಒಂದು ಪತ್ರ ಬರೆಯಿರಿ. (1x5=5)

VII. ಇವುಗಳಲ್ಲಿ ನಾಲ್ಕು ಪದಗಳಿಗೆ ಅರ್ಥ ಬರೆಯಿರಿ. (4x1=4)

1) ನಿಧಿ
2) ಷಹರ
3) ಉಟ್ಟರವಿ
4) ಪ್ಯಾಟಿ
5) ಸಂಶಯ
6) ಪರಿಗ್ರಹಿಸು

VIII. ಇವುಗಳಲ್ಲಿ ಒಂದೊಂದು ಸರಿ ಉತ್ತರವನ್ನು ಗುರುತಿಸಿ ಬರೆಯಿರಿ. (ಎಲ್ಲಾ ಐದು ಪ್ರಶ್ನೆಗಳಿಗೆ ಉತ್ತರಿಸಿ.) (5x1=5)

1) ವೀರನಾರಾಯಣನ ಬೀಡು ಯಾವುದು ?

a) ಕಾರ್ಕಳ b) ಧಾರವಾಡ c) ಗದಗ d) ಕೊಪ್ಪಳ

2) 'ನಮ್ಮ ನಗರದ ಬದುಕು' ಕವಿತೆಯನ್ನು ರಚಿಸಿದವರು ಯಾರು ?

a) ಕುವೆಂಪು b) ಬೇಂದ್ರೆ
c) ಕೆ. ಎಸ್. ನಿಸಾರ್ ಅಹಮ್ಮದ್ d) ಕೆ. ಎಸ್. ನರಸಿಂಹಸ್ವಾಮಿ

3) 'ಹೃದಯದ ತೊಂದರೆ ' ಕಥೆಯಲ್ಲಿ ಬರುವ ಮಗನ ಹೆಸರೇನು ?

a) ಶಿವಾನಂದ b) ರಮಾನಂದ c) ಕಾವ್ಯಾನಂದ d) ಸದಾನಂದ

4) ವೆಂಕಟೇಶಮೂರ್ತಿಯ ಮಗಳ ಹೆಸರೇನು ?

a) ವನಜಾ b) ಜಲಜಾ c) ಪಂಕಜ d) ಸರೋಜ

5) ವಾರೆನ್ ಬಫೆಟ್ ಯಾವ ದೇಶದವರು ?

a) ಇಂಗ್ಲೆಂಡ್ b) ಜರ್ಮನಿ c) ಅಮೇರಿಕಾ d) ರಷ್ಯಾ

---

Scanned with OKEN Scanner